**ದಿನಾಂಕ:24-03-2023 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಮುಂದುವರೆದ ಪಾಟೀ ಸವಾಲುಃ 2 ಮತ್ತು 13 ನೇ ಪ್ರತಿವಾದಿ ಪರ ಶ್ರೀ.ಸಿ.ಪಿ.ಜೆ ವಕೀಲರಿಂದ :**

ನಮ್ಮ ಮನೆದಳದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಲು ನನಗೆ ತೊಂದರೆ ಇತ್ತೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ ಎಂದು ಸ್ವತಃ ನುಡಿಯುತ್ತಾರೆ. ಈ ದಾವೆಯಲ್ಲಿ ನಾನು ನಮ್ಮ ಕುಟುಂಬದ ಮನೆದಳದ ಆಸ್ತಿಗಳನ್ನು ಸೇರಿಸಿರುವುದಿಲ್ಲ. ನಮ್ಮ ಮನೆತನಕ್ಕೆ ಸೇರಿದ ವಿಪಿಸಿ ನಂಬರ 1 ತಗಡಿನ ರೈಸ್ ಮಿಲ್ ಅನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಈ ಮೇಲೆ ಹೇಳಲಾದ ಆಸ್ತಿಯನ್ನು ಸೇರಿಸದೇ ಇದ್ದರೂ ಸಹ ಸೇರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1993 ರ ನಮ್ಮ ಕುಟುಂಬದಲ್ಲಿ ಅದ ವಾಟ್ನಿ ಪ್ರಕಾರ ರಿ ಸ ನಂಬರ 175/2 ರ ಜಮೀನು ನನ್ನ ತಂದೆಯ ಹಿಸ್ಸೆಗೆ ಬಂತು ಎಂದರೆ ನನಗೆ ಗೊತ್ತಿಲ್ಲ. ಆ ವಾಟ್ನಿ ಪ್ರಕಾರ ನನ್ನ ತಂದೆಯವರು ಮೃತಪಟ್ಟ ನಂತರ ರಿ ಸ ನಂಬರ 175/2 ರ ಆಸ್ತಿ ನನಗೆ ಬರಬೇಕು ಎಂದು ನಮೂದಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ಆಸ್ತಿಯೂ ಸಹ ನಮ್ಮ ಕುಟುಂಬದ ಆಸ್ತಿ ಎಂದರೆ ಇರಬಹುದು. ಈ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇಲ್ಲ. ಸರ್ವೇ ನಂಬರ 175/2 ರ ಆಸ್ತಿ ನಮ್ಮ ಕುಟುಬದ ಆಸ್ತಿಯಾಗಿದ್ದರೂ ಸಹ ಉದ್ದೇಶಪೂರ್ಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಈ ಆಸ್ತಿ ಯನ್ನು ನಾನು ಮತ್ತು ನನ್ನ ತಂದೆಯವರು ಕೂಡಿಯೇ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ಆಸ್ತಿಯನ್ನು ನನ್ನ ಅನುಮತಿಯ ಮೇರೆಗೆ ನನ್ನ ತಂದೆಯವರು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಆಸ್ತಿಯನ್ನು ನನ್ನ ತಂದೆಯವರು ಮಹಮ್ಮದ ಹಯಾತ್ ತಂದೆ ರಸೂಲ್ ಸಾಬ್ ಬಡಗಿರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ದಿಃ19-02-1993 ರಂದು ಕ್ರಯ ಪತ್ರ ರಾಗಿದ್ದು ಅದಕ್ಕೆ ನಾನು ಸಮ್ಮತಿ ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ಆ ಆಸ್ತಿಯನ್ನು ನಾನು ಮತ್ತು ನನ್ನ ತಂದೆಯವರು ಸೇರಿಯೇ ಮಾರಾಟ ಮಾಡಿದ್ದರೂ ಸಹ ಮಾರಾಟ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣ ಈ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಈ ಆಸ್ತಿಯನ್ನು ಕ್ರಯಕ್ಕೆ ಪಡೆದ ಮಹಮ್ಮದ ಹಯಾತ್ ಬಡಗಿ ರವರನ್ನು

ಈ ದಾವೆಗೆ ಅವಶ್ಯಕ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿಯಲ್ಲ. ಈ ಆಸ್ತಿಯನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿದರೆ ನನಗೆ ಹಿಸ್ಸೆ ಕಡಿಮೆ ಬರುತ್ತದೆ ಎಂಬ ಕಾರಣಕ್ಕಾಗಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. 1993 ರ ನಮ್ಮ ಕುಟುಂಬದ ವಾಟ್ನಿಯಂತೆ ರಿ ಸ ನಂಬರ 175/2 ರ ಆಸ್ತಿ ನನ್ನ ಹಿಸ್ಸೆಗೆ ಬಂದಿದ್ದು, ಆ ಆಸ್ತಿಯನ್ನು ನಾನು ಮತ್ತು ನನ್ನ ತಂದೆಯವರು ಕೂಡಿಯೇ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ.

(**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ